**ವಿಷಯ** ಪಂ.ರಾ.ಇಂ ಇಲಾಖೆಯಲ್ಲಿ 80 ತಾಲ್ಲೂಕು ಬರಪೀಡಿತ ನೀರು ಶುದ್ಧೀಕರಣ ಪ್ರಯೋಗಾಲಯ ಸ್ಥಾಪಿಸಲು ಟೆಂಡರ್ ಕರೆಯುವ ಬಗ್ಗೆ

**ಗ್ರಾಅಪ** 43 ENQ 2016

---

195) ಉಪ ಕಾರ್ಯದರ್ಶಿ (ಅಭಿವೃ) ಇವರಿಂದ ಸಹಿ ಪಡೆದು ಸಂಚಿಕೆ ಸಹ.

[signature] 10/10

ಎಸ್.ಕೆ. [illegible]
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

Pr.Secy./RDPR
No. 1166 Dt. 10/x/17

196) [illegible] ಪ್ರಧಾನ ಕಾರ್ಯದರ್ಶಿಯವರು

[signature] 12/10

ಉ.ಕಾ-1

[signature] 13/10

**ವಿಷಯ** ಪಂ.ರಾ.ಇಂ. ಇಲಾಖೆಯಲ್ಲಿ 80 ತಾಲ್ಲೂಕು ಮಟ್ಟದ ನೀರು ಶುದ್ಧೀಕರಣ ಪ್ರಯೋಗಾಲಯ ಸ್ಥಾಪಿಸಲು ಟೆಂಡರ್ ಕರೆಯುವ ಬಗ್ಗೆ

**ಗ್ರಾಅಪ** 43 ENQ 2016

197) ಕಂಡಿಕೆ 195 ರಲ್ಲಿನ ಮಾನ್ಯ ಗ್ರಾ.ಅ.ಪಂ ರಾಜ್ ಸಚಿವರ ಆದೇಶದ ಅನುಸಾರ ಪರಿಶೀಲಿಸಲಾಗಿದೆ. ಪಂ.ರಾ.ಇಂ ಇಲಾಖೆಯಲ್ಲಿ ಗ್ರಾಮೀಣ ಕುಡಿಯುವ ನೀರಿನ ಮಾದರಿಗಳನ್ನು ಪರೀಕ್ಷಿಸಲು 80 ತಾಲ್ಲೂಕು ಮಟ್ಟದ ನೀರು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲು ಹಾಗೂ ಸದರಿ ಪ್ರಯೋಗಾಲಯಗಳಿಗೆ ಸಾಮಗ್ರಿಗಳನ್ನು ಒದಗಿಸುವ ಸಂಬಂಧದ ಕಾಮಗಾರಿಯ ಟೆಂಡರ್ ಕರೆಯಲು ಹಾಗೂ ಹಣ ಬಿಡುಗಡೆ ಮಾಡುವ ಸಂದರ್ಭದಲ್ಲಿ ಎಸಗಿರುವ ಕರ್ತವ್ಯ ಲೋಪ ಹಾಗೂ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಒಟ್ಟು 10 ಜನ ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾವನೆ ಇರುತ್ತದೆ.

198) ಸದರಿ ವಿಷಯದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿದ್ದು (ಪುಟ 758) ಟೆಂಡರ್ ಷರತ್ತುಗಳ ಉಲ್ಲಂಘನೆಯಾಗಿದ್ದಲ್ಲಿ ಅಂತಹ ಸಂದರ್ಭಗಳಲ್ಲಿ ಟೆಂಡರ್ ರದ್ದುಗೊಳಿಸಲು ಅವಕಾಶವಿದೆ ಎಂದು ಕಾನೂನು ಇಲಾಖೆಯು ಅಭಿಪ್ರಾಯ ಪಟ್ಟಿರುತ್ತದೆ. ಈ ಹಿನ್ನಲೆಯಲ್ಲಿ ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಮೆ:ರೆ ಎನ್‌ವಿರಾನ್, ಬೆಂಗಳೂರು ಇವರಿಗೆ ದಿ:17.04.2017ರಂದು ಪತ್ರ ಬರೆದು ಟೆಂಡರ್ ಕರಾರಿನ ಷರಾಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವ ಕಾರಣ 100 ತಾಲ್ಲೂಕು ಮಟ್ಟದ ಪ್ರಯೋಗಾಲಯಗಳ ಸ್ಥಾಪನೆಗೆ ಸಂಬಂಧಿಸಿದ ಟೆಂಡರನ್ನು ರದ್ದುಪಡಿಸಿರುತ್ತಾರೆ (ಪುಟ 764). ಈ ಕುರಿತು ಮುಖ್ಯ ಇಂಜಿನಿಯರ್‌ರವರ ದೂರವಾಣಿ ಮೂಲಕ ಸಂಪರ್ಕಿಸಲಾಗಿದ್ದು ಮೆ: ರೆ ಎನ್‌ವಿರಾನ್, ಬೆಂಗಳೂರು ಇವರು ಮುಖ್ಯ ಇಂಜಿನಿಯರ್‌ರವರ ಟೆಂಡರ್ ರದ್ದತಿ ಕ್ರಮದ ವಿರುದ್ಧ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಇನ್ನು ಅಂತಿಮವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

199) ಪ್ರಸ್ತುತ ಪ್ರಕರಣದಲ್ಲಿ ಈಗಾಗಲೇ ಮುಖ್ಯ ಇಂಜಿನಿಯರ್‌ರವರು ಟೆಂಡರನ್ನು ರದ್ದುಪಡಿಸಿರುವುದರಿಂದ ಪ್ರಕರಣದಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿದೆಯೇ? ಇಲ್ಲವೇ? ಒಂದು ವೇಳೆ ಆರ್ಥಿಕ ನಷ್ಟ ಉಂಟಾಗಿದ್ದಲ್ಲಿ ಅದಕ್ಕೆ ಯಾವ ಯಾವ ಅಧಿಕಾರಿಗಳು ಎಷ್ಟು ಮೊತ್ತಕ್ಕೆ ಜವಾಬ್ದಾರಾಗಿದ್ದಾರೆ ಎಂಬ ಬಗ್ಗೆ ವಿವರವಾದ ವರದಿಯನ್ನು ಮುಖ್ಯ ಇಂಜಿನಿಯರ್‌ರವರಿಂದ ಪಡೆದು ಈ ದಿಸೆಯಲ್ಲಿ ಸೂಕ್ತ ಮಾರ್ಪಾಡುಗಳನ್ನು ದೋಷಾರೋಪಣಾ ಪಟ್ಟಿಯಲ್ಲಿ ಮಾಡಲು ಕ್ರಮ ವಹಿಸಲಾಗುವುದು.

200) ಪ್ರಸ್ತುತ ಪ್ರಕರಣದಲ್ಲಿ ಒಟ್ಟು 10 ಜನ ಅಧಿಕಾರಿ ನೌಕರರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಪ್ರಸ್ತಾವನೆ ಇದ್ದು ಈ ಸಂಬಂಧಪಟ್ಟ ಆರೋಪನ ಪಟ್ಟಿಯನ್ನು ಪುಟ 697–750 ರಲ್ಲಿ ಮಂಡಿಸಿದ್ದು ದಯವಿಟ್ಟು ಅವಗಾಹಿಸುವುದು.

201) ಮುಂದುವರೆದು ಪ್ರಸ್ತುತ ಪ್ರಕರಣದಲ್ಲಿ ಬಾಗಿಯಾಗಿರುವರೆನ್ನಲಾದ ಮುಖ್ಯ ಇಂಜಿನಿಯರ್ ಕೇಂದ್ರ ಕಛೇರಿಯ ಲೆಕ್ಕಪತ್ರ ವಿಭಾಗದ ಈ ಕೆಳಕಂಡ ನೌಕರರುಗಳನ್ನು ಸರ್ಕಾರವು ದಿ:21.03.2017 ರ ಆದೇಶದಲ್ಲಿ ಸೇವೆಯಿಂದ ಅಮಾನತ್ತು ಪಡಿಸಿರುತ್ತದೆ:-

1. ಶ್ರೀ ಎಂ.ಜಿ. ನಾಗೇಶ್ವರರಾವ್, ಲೆಕ್ಕಾಧೀಕ್ಷಕರು
2. ಶ್ರೀ ಹನುಮ ಮೂರ್ತಿ, ಪ್ರ.ದ.ಲೆ.ಸ
3. ಶ್ರೀಮತಿ ಕೌಸರ್ ಪರ್ವಿನ್, ಪ್ರ.ದ.ಸ

202) ಯಾವುದೇ ಸರ್ಕಾರಿ ನೌಕರರನ್ನು ಸೇವೆಯಿಂದ ಅಮಾನತ್ತು ಪಡಿಸಿದ ಸಂದರ್ಭಗಳಲ್ಲಿ ಸಕ್ಷಮ ಪ್ರಾಧಿಕಾರವು ಪ್ರತಿ 3 ತಿಂಗಳಿಗೊಮ್ಮೆ ಅವರುಗಳನ್ನು ಅಮಾನತ್ತಿನಲ್ಲಿ ಮುಂದುವರಿಸುವ ಅವಶ್ಯಕತೆ ಇದೆಯೇ? ಅಥವಾ ಸೇವೆಗೆ ಪುನರ್ ಸ್ಥಾಪಿಸಿ ಅವರುಗಳನ್ನು ಕೆಲಸ ನಿರ್ವಹಿಸುತ್ತಿದ್ದ ಹುದ್ದೆ/ ಸ್ಥಳದಿಂದ ಬೇರೆ ಹುದ್ದೆಗೆ ಸ್ಥಳ ನಿಯುಕ್ತಿ ನೀಡಬಹುದೇ ಎಂಬ ಬಗ್ಗೆ ಪರಿಶೀಲಿಸಿ ನಿರ್ಣಯ ಕೈಗೊಳ್ಳಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸೂಚನೆಗಳನ್ನು ನೀಡಿರುತ್ತದೆ.

203) ಪ್ರಸ್ತುತ ಪ್ರಕರಣದಲ್ಲಿ ಗುತ್ತಿಗೆದಾರರು ಟೆಂಡರ್ ನಿಬಂಧನೆಗಳನ್ನು ಉಲ್ಲಂಘಿಸಿರುವ ಕಾರಣ ಗುತ್ತಿಗೆಯನ್ನು ರದ್ದುಪಡಿಸಲಾಗಿದ್ದು ಪ್ರಕರಣದಲ್ಲಿ ಆರ್ಥಿಕ ನಷ್ಟ ಉಂಟಾಗಿದೆಯೇ? ಇಲ್ಲವೇ ಎಂಬ ಬಗ್ಗೆ ಕಂಡಿಕೆ 199 ರಲ್ಲಿ ತಿಳಿಸಿರುವಂತೆ ಕ್ರಮ ವಹಿಸಲು ಸ್ವಲ್ಪ ಸಮಯ ಅವಕಾಶದ ಅವಶ್ಯಕತೆ ಇರುತ್ತದೆ.

204) ಹಾಲಿ ಅಮಾನತ್ತಿನಲ್ಲಿರುವ 3 ಜನ ನೌಕರರು ಲೆಕ್ಕಪತ್ರ ವಿಭಾಗದ ಸಿಬ್ಬಂದಿಯಾಗಿದ್ದು ಅವರುಗಳು ಮೂಲತಃ ರಾಜ್ಯ ಲೆಕ್ಕಪತ್ರ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿದವರಾಗಿರುತ್ತಾರೆ. ಸದರಿಯವರುಗಳು ಆರ್ಥಿಕ ನಷ್ಟಕ್ಕೆ ಜವಾಬ್ದಾರರೇ ಅಲ್ಲವೇ ಎಂಬುದು ಇನ್ನು ಖಚಿತವಾಗಿರುವುದಿಲ್ಲ. ಅಲ್ಲದೆ ಈಗಾಗಲೇ ಸದರಿಯವರುಗಳನ್ನು ಸೇವೆಯಿಂದ ಅಮಾನತ್ತು ಪಡಿಸಿ 7 ತಿಂಗಳಿಗೂ ಹೆಚ್ಚಿನ ಅವಧಿ ಗತಿಸಿರುತ್ತದೆ. ಈ ಹಂತದಲ್ಲಿ ಸದರಿಯವರನ್ನು ಅಮಾನತ್ತಿನಲ್ಲಿ ಮುಂದುವರೆಸುವ ಅವಶ್ಯಕತೆ ಇದೆಯೇ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಆರ್ಥಿಕ ನಷ್ಟದ ಬಗ್ಗೆ ಖಚಿತತೆ ಇಲ್ಲದೇ ಇರುವ ಕಾರಣ ಹಾಗೂ ಈ 3 ಜನ ಲೆಕ್ಕಪತ್ರ ವಿಭಾಗದ ಸಿಬ್ಬಂದಿಗಳು ಎಷ್ಟು ಮೊತ್ತದ ನಷ್ಟಕ್ಕೆ ಕಾರಣರಾಗಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲದ ಕಾರಣ ಅವರನ್ನು ಅಮಾನತ್ತಿನಲ್ಲಿ ಮುಂದುವರೆಸುವ ಸಂದರ್ಭ ಇರುವುದಿಲ್ಲ. ಅಲ್ಲದೆ ಸದರಿಯವರು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಅಥವಾ ದಾಖಲೆಗಳನ್ನು ನಾಶ ಪಡಿಸುವಂತಹ ಪ್ರಭಾವಿ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿಲ್ಲ.

ವಿಷಯ ಪಂ.ರಾ.ಇಂ. ಇಲಾಖೆಯಲ್ಲಿ 80 ತಾಲ್ಲೂಕು ಮಟ್ಟದ ನೀರು ಶುದ್ಧೀಕರಣ ಪ್ರಯೋಗಾಲಯ ಸ್ಥಾಪಿಸಲು ಟೆಂಡರ್ ಕರೆಯುವ ಬಗ್ಗೆ.

ಗ್ರಾಅಪ 43 ENQ 2016

205) ಸದರಿಯವರುಗಳು ಮೂಲತಃ ರಾಜ್ಯ ಲೆಕ್ಕಪತ್ರ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿದ ನೌಕರರಾದ ಕಾರಣ ಮೇಲೆ ವಿವರಿಸಿರುವ ಕಾರಣಗಳಿಗಾಗಿ ಸದರಿಯವರ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಿ ಅವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸುವುದು ಸೂಕ್ತವಾಗಿದೆ.

206) ಮೇಲಿನ ಕಂಡಿಕೆಗಳಲ್ಲಿನ ವಿವರಣೆಯ ಹಿನ್ನಲೆಯಲ್ಲಿ ಕಂಡಿಕೆ 205 ರ ಬಗ್ಗೆ ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆದೇಶ ಕೋರಬಹುದು.

23/10/17

ಉಪ ಕಾರ್ಯದರ್ಶಿ (ಆಡಳಿತ)
D.S. (Admn.-1)
RDPR Department

207) ~~ಪ್ರಧಾನ ಕಾರ್ಯದರ್ಶಿಗಳು~~}

ಪ್ರ. ಸಚಿವರು

22/10

208) ಉ.ಕಾ.-1

209) ಸಚಿವರಿಗೆ.

24/11/17

210) ಮಾನ್ಯ ಗ್ರಾ/ಅ ಮತ್ತು ಪಂ. ರಾಜ್ ಸಚಿವರು

ಡಾ. ಎಸ್. ನಾಗಾಂಬಿಕಾ ದೇವಿ, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ

Pr.Secy./RDPR
No. 2673 Dt. 25/10/17

Pr.Secy./RDPR
No. 2788 Dt. 07/11/17

211) ಕಂಡಿಕೆ 205 ರ ಬಗ್ಗೆ ಒಪ್ಪಿದೆ.

20/12

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಛೇರಿ
ಸಂಖ್ಯೆ: 4402
ಸ್ವೀಕೃತಿ ದಿ: 07/11/2017
ರವಾನೆ ದಿ:

212) ಸರ್ಕಾರದ ಪ್ರ.ಕಾರ್ಯದರ್ಶಿಗಳು